ಎತ್ತು ಮತ್ತು ಗಾಡಿ ಕೊಳ್ಳಲು ಸಹಾಯಧನ

124 (723)– ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ನೀತಿಯ ಬಗ್ಗೆ ಪ್ರಕಟಿಸಿರುವ ವಿಶೇಷ ಯೋಜನೆಗಳಲ್ಲಿ ರೈತರಿಗೆ ಎತ್ತು ಮತ್ತು ಗಾಡಿ ವಿತರಣೆಯಲ್ಲಿ ಯಾವುದಾದರೂ ಒಂದು ಸೌಲಭ್ಯವನ್ನು ಕಲ್ಪಿಸುವುದು ನಿಜವೇ,

ಆ) ಎತ್ತು ಮತ್ತು ಗಾಡಿ ಕೊಳ್ಳಲು ತಲಾ ರೂ 10000/–ಗಳ ಸಹಾಯಧನ ನೀಡುತ್ತಿರುವುದು ಕಡಿಮೆ ಇರುವುದರಿಂದ ಪೂರ್ಣ ಪ್ರಮಾಣದ ಪ್ರಯೋಜನವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ, ಎತ್ತು ಮತ್ತು ಗಾಡಿ ಸೌಲಭ್ಯವನ್ನು ಒಟ್ಟಿಗೆ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಈ) ಈ ಸೌಲಭ್ಯವನ್ನು ಹೆಚ್ಚು ಹೆಚ್ಚು ಜನರಿಗೆ ಕಲ್ಪಿಸಿ ಕೊಡಲಾಗುವುದೇ?

ಶ್ರೀ ಬಂಡೆಪ್ಪ ಕಾಶಂಪುರ (ಕೃಷಿ ಸಚಿವರು)

ಅ) ಹೌದು, ಅನುದಾನದ ಲಭ್ಯತೆ ಆಧಾರದ ಮೇಲೆ ಪರಿಶೀಲಿಸಲಾಗುವುದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಬೇಡಿಕೆ ಹಾಗೂ ಅನುದಾನದ ಲಭ್ಯತೆ ಮೇಲೆ ಈ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯ ರೈತರಿಗೆ ವಿಸ್ತರಿಸಬೇಕಾಗುತ್ತದೆ

ಶ್ರೀ ಜೆ ನರಸಿಂಹಸ್ವಾಮಿ ಮಾನ್ಯ ಅಧ್ಯಕ್ಷರೆ, ನಾನು ಎತ್ತುಗಾಡಿ ಕೊಳ್ಳುವುದಕ್ಕೆ ಸಹಾಯಧನದ ಬಗ್ಗೆ ಹೇಳಿದ್ದೇನೆ ಇದರಲ್ಲಿ ಎತ್ತು ಮತ್ತು ಗಾಡಿ ಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆಯೇ ಎಂದು ನಾನು ಕೇಳಿದರೆ, ಉದ್ಭವಿಸುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ ಹಾಗೆಂದರೆ ನನಗೆ ಅರ್ಥವಾಗುತ್ತಿಲ್ಲ ರೈತರಿಗೆ ಎತ್ತು ಮತ್ತು ಗಾಡಿ ಎರಡನ್ನು ಕೊಟ್ಟರೆ ತೊಂದರೆಯಾಗುತ್ತದೆಯೇ? ಅಥವಾ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದರೆ ನನಗೆ ಅರ್ಥವಾಗುತ್ತಿಲ್ಲ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಈಗ ಏನು ಸರ್ಕಾರದವರು ಎತ್ತು ಮತ್ತು ಗಾಡಿಯನ್ನು ಕೊಡುವುದಕ್ಕೆ

ಯೋಜನೆಯನ್ನು ಮಾಡಿದ್ದಾರೆ, ರೈತರು ಬಹಳ ಆಸೆಯಿಂದ ಇದ್ದರು, ಆದರೆ ಅಲ್ಲಿ ನೋಡಿದರೆ ಒಂದು ಪಂಚಾಯಿತಿಯಲ್ಲಿ 2–3 ಫಲಾನುಭವಿಗಳಿಗೆ ಮಾತ್ರ ಕೊಡುವುದಕ್ಕಾಗುತ್ತದೆ ಇದನ್ನು ಶಾಸಕರ ಅಧ್ಯಕ್ಷತೆಯಲ್ಲಿ ಕೊಡುವುದರಿಂದ ಇವತ್ತು ಬೇಡಿಕೆಯ ಅನುದಾನದಲ್ಲಿ, ಸೌಲಭ್ಯ ಹೆಚ್ಚು ಹೆಚ್ಚು ಬಂದಾಗ ಜನರಿಗೆ ಅವಕಾಶವನ್ನು ಕಲ್ಪಸಿಕೊಡಲಾಗುವುದೇ ಎಂದು ನಾನು ಕೇಳಿದರೆ, ಬೇಡಿಕೆ ಹಾಗೂ ಅನುದಾನದ ಲಭ್ಯತೆಯ ಮೇಲೆ ಈ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯ ರೈತರಿಗೆ ವಿಸ್ತರಿಸಬೇಕಾಗುತ್ತದೆ ಎಂದು ಹೇಳುತ್ತಾರೆ ಈಗ ಬೇಡಿಕೆಯು ಬಹಳಷ್ಟು ಇದೆ ನನ್ನ ತಾಲ್ಲೂಕಿನಲ್ಲಿ ಸುಮಾರು -600–800 ಅರ್ಜಿಗಳು ಬಂದಿವೆ, ಈ ಬೇಡಿಕೆಯು ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆ? ಅವರು 120 ಇದೆ ಎಂದು ಕೊಟ್ಟಿದ್ದಾರೆ ಹೆಚ್ಚಿನ ಫಲಾನುಭವಿಗಳಿಗೆ ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನೂ ಒತ್ತಾಯಿಸುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶಂಪೂರ್ ಮಾನ್ಯ ಅಧ್ಯಕ್ಷರೆ, ಈ ಎತ್ತುಬಂಡಿಗಾಗಿ ವಿಶೇಷವಾಗಿ ಈ ಸಾಲಿನ ಬಜೆಟ್‌ನಲ್ಲಿ 5 ಕೋಟಿ ರೂ ಗಳನ್ನು ಇಡಲಾಗಿದೆ supplementary budgetನಲ್ಲಿ 15 ಕೋಟಿ ರೂ ಗಳನ್ನು ತೆಗೆದುಕೊಂಡು ಇಡೀ ರಾಜ್ಯಾದ್ಯಂತ 20 ಸಾವಿರ beneficiaryಗಳಿಗೆ ಕೊಡಬೇಕೆಂಬ ನಿಟ್ಟಿನಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವ ಮಾನ್ಯ ಸದಸ್ಯರು ಹೇಳಿದ ಹಾಗೆ ಇದಕ್ಕೆ ಹೆಚ್ಚಿನ demand ಇದೆ ನಾವು ಎಲ್ಲಾ ಕಡೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಶಾಸಕರ ನೇತೃತ್ವದಲ್ಲಿ ಆಯ್ಕೆ ಸಮಿತಿಯನ್ನು ಮಾಡಿದ್ದೇವೆ ಒಂದೊಂದು ತಾಲ್ಲೂಕಿನಲ್ಲಿ ಸುಮಾರು 600 ರಿಂದ 1000 applications ಬಂದಿದೆ ಎತ್ತು ತೆಗೆದುಕೊಂಡರೆ ಬಂಡಿ ಇಲ್ಲ, ಬಂಡಿಯನ್ನು ತೆಗೆದುಕೊಂಡರೆ ಎತ್ತು ಇಲ್ಲವೆನ್ನುವಂತಹ ಮಾತು ಶಾಸಕರು ಹೇಳಿದರು ಇವತ್ತು ಮೊಟ್ಟಮೊದಲು ಎತ್ತನ್ನು ತೆಗೆದುಕೊಳ್ಳಬೇಕು, ಏಕೆಂದರೆ, ತಾವು ನೋಡಿದ್ದೀರಿ, ಹೋದ ವರ್ಷದಲ್ಲಿ ಒಂದು ಪೇಪರ್‌ನಲ್ಲಿ ಒಬ್ಬ ಮಹಿಳೆಯು ತನ್ನ ಭುಜದ ಮೇಲೆ ನೇಗಿಲನ್ನು ತೆಗೆದುಕೊಂಡು ಹೋಗುವಂತಹ ದೃಶ್ಯದ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿತ್ತು ಇವತ್ತು ಅಂತಹ ಜನರಿಗೆ ಒಂದು ಜೊತೆ ಎತ್ತನ್ನು ಕೋಡುವುದರ ಮುಖಾಂತರ ಸಹಾಯ ಮಾಡುವುದಕ್ಕೆ ಇವತ್ತು,ರಾಜ್ಯ ಸರ್ಕಾರ ವಿಶೇಷವಾದ ಯೋಜನೆಯನ್ನು ತೆಗೆದುಕೊಂಡು ಬಂದಿದೆ ಇವತ್ತು ಎತ್ತಿನಿಂದ ನೇಗಿಲನ್ನು ಹೊಡೆಯಬಹುದು, ನೇಗಿಲನ್ನು ಕೂಡ ನಾವು subsidy

ಮುಖಾಂತರ ಕೊಡುತ್ತಿದ್ದೇವೆ ಸುಮಾರು Area ದಲ್ಲಿ ಬಂಡಿಯನ್ನು ಇಟ್ಟುಕೊಂಡು ಬಹಳ ಜನರು ಉದ್ಯೋಗವನ್ನು ಮಾಡುತ್ತಾರೆ ಬಂಡಿಗೂ ಸಹ ಅವಕಾಶವನ್ನು ಕೋಡೋಣವೆಂದು ಎರಡರಲ್ಲಿ ಯಾವುದಾದರೂ ಒಂದನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾವು ಈ ಯೋಜನೆಯನ್ನು ತಂದಿದ್ದೇವೆ ಮಾನ್ಯ ಸದಸ್ಯರು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಕೊಡಬೇಕೆಂದು ಹೇಳಿದರು ಈ ವರ್ಷ ಇದನ್ನು start ಮಾಡಿದ್ದೇವೆ, ಇನ್ನು ಹೆಚ್ಚಿನ demand ಬರುತ್ತಿದೆ ಇನ್ನು ಹೆಚ್ಚಿನ ಶಾಸಕರು "ನಮಗೆ ಇನ್ನು ಸ್ವಲ್ಪ extra ಕೊಡಿ" ಎಂದು ಕೇಳುತ್ತಿದ್ದಾರೆ ಅದರ ಬಗ್ಗೆ ಮುಂದಿನ ಸಾಲಿನ ಬಜೆಟ್‌ನಲ್ಲಿ ಪರಿಶೀಲನೆ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಆ ಬಂಡಿಗೆ break ಇಲ್ಲ ನಮ್ಮ ಮಲೆನಾಡಿನಲ್ಲಿ ಬಹಳ ಕಷ್ಟವಾಗುತ್ತದೆ ಅದಕ್ಕೆ ಒಂದು break ಹಾಕಿಸಿಕೊಡಿ ಇಲ್ಲದಿದ್ದರೆ ಇದಕ್ಕೆ 2 ರಿಂದ 3 ಸಾವಿರ ರೂಗಳು ಆಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಏನು ದೋಸ್ತಿಗಳದ್ದು ಕುಸ್ತಿ ನಡೆಯುತ್ತಿದೆ ದೋಸ್ತಿಗಳದ್ದು ಜಂಗಿ ಕುಸ್ತಿ ನಡೆಯುತ್ತಿದೆ ಅದರ ಬಗ್ಗೆ ನಮಗೂ ಸ್ವಲ್ಪ ಹೇಳಿ

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ಗಾಡಿಗೆ ನೊಗವು ಸಹ ಇಲ್ಲ ಗಾಡಿಯನ್ನು ಕೊಡುತ್ತೀರಿ, ನೊಗ ಬೇಡವೇ? ನನ್ನ ಪ್ರಕಾರ ಮಹಿಳೆಯು ಗಾಡಿಯನ್ನು ಎಳೆದುಕೊಂಡು ಹೋಗುತ್ತಾಳೆ ಎಂದು ಹೇಳಿದರೆ ಎತ್ತುಗಳನ್ನು ಎಲ್ಲಿ ಕಟ್ಟುತ್ತೀರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ದೋಸ್ತಿಗಳದು ಕುಸ್ತಿಯನ್ನು ನಾವು ನೋಡುತ್ತಿದ್ದೇವೆ

ಶ್ರೀ ಆರಗ ಜ್ಞಾನೇಂದ್ರ ಆಗ ಒಂದು ಸಾರಿ ಮತ್ತು ಈಗ ಒಂದು ಸಾರಿ entertainment ನಿಮಗೆ ಇರಲಿ ಎಂದು ಮಾಡುತ್ತಿದ್ದೇವೆ

ಅಧ್ಯಕ್ಷರು ಸಚಿವರು ಉತ್ತರ ಹೇಳಿದ್ದಾರಲ್ಲಾ ಆಯಿತು ಈಗ

ರಾಷ್ಟ್ರೀಯ ಕೃಷಿ ವಿಮಾ ಯೋಜನೆ

126 (720) – ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಯಾ ಅವರೆ, ಒಣಮೆಣಸಿನಕಾಯಿ ಹಾಗೂ ಗೋವಿನ ಜೋಳ ಈ ಬೆಳೆಗಳು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯ